ಬಗ್ಗೆ ಈ ಸದನದಲ್ಲಿ ಈ ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ಹೇಳುವುದಕ್ಕೆ ನಾನು ಅವಕಾಶವನ್ನು ತೆಗೆದುಕೊಳ್ಳುತ್ತೇನೆ. 1995-96ರಲ್ಲಿ ಯು.ಕೆ.ಪಿ.ಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥಾದ್ದರ ಬಗ್ಗೆ ಈ ಸದನದಲ್ಲಿ ಭರವಸೆ ಕೊಡುತ್ತೇನೆ ಎಂದು ನಾನು ಏನು ಹೇಳಿದ್ದೇನೆ. ಅದಕ್ಕೆ ನಾನು ಬದ್ಧನಾಗಿದ್ದೇನೆ. ಅದಕ್ಕೆ ಹಣವನ್ನು ರೂಢಿಸತಕ್ಕದ್ದು ಏನಿದೆ ಇದರ ಬಗ್ಗೆ ಇವತ್ತು ನಾನು ಏನೇ ಹೇಳಿದರೂ ನಿಮ್ಮ ಮನಸ್ಸಿನಲ್ಲಿರುವ ಸಂಶಯವನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಿದ್ರೆ ಮಾಡುವವನನ್ನು ಎಬ್ಬಿಸುವುದಕ್ಕೆ ಸಾಧ್ಯವಾಗುವುದಿಲ್ಲ. I will give l;this lmuch assurance ನಾನು ಈ ಸದನದಲ್ಲಿ ಹೇಳುತ್ತೇನೆ. I am not going back on my words.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾವು ಕೇಳುತ್ತಾ ಇದ್ದೇವೆ. You keep minimum requirement, ಎಂದಾಗ ನಿದ್ದೆ ಮಾಡಿದ ಹಾಗೆ ನಟನೆ ಮಾಡುವವರನ್ನು ಎಬ್ಬಿಸುವುದಕ್ಕೆ ಸಾಧ್ಯವಿಲ್ಲವೆಂದರೆ if this is the attitude we don't want to participate in this, we will stage walk out...

SRI H.D.DEVEGOWDA:- It is an commitment on behalf of the government.

SRI M.MALLIKARJUNA KHARGE:- If this is an attitude we don't want to co-operate....

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ :- ಬಡ್ಡಿ, ಸುಸ್ತಿ ಬಡ್ಡಿಯನ್ನು.....

(ಗೊಂದಲ)

(ಬಿ.ಜೆ.ಪಿ.ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :- ಸಿದ್ಧರಾಮಯ್ಯನವರೆ ತಾವು ಶುರು ಮಾಡಿ

ಅನುದಾನ ಬೇಡಿಕೆಗಳು 1995-96

ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ 1 ರಿಂದ 60 ರವರೆಗಿನ ಬೇಡಿಕೆಗಳಿಗೆ ಸರ್ಕಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಆಯಾ ಬೇಡಿಕೆಗಳಿಗೆ